# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 7/2020</u>

ಫ್ರಾಸಾ-04

ಚಾಸಾ-08

| | | |
|---|---|---|
| ಸಾಕ್ಷಿಯ ಹೆಸರು | - | ರಿಯಾಜಅಹ್ಮದ ಹುಬ್ಬಳ್ಳಿ |
| ತಂದೆ ಹೆಸರು | - | ಇಮಾಮಸಾಬ |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಸಹಾಯಕ ಅಭಿಯಂತರರು, ಮಹಾನಗರ ಪಾಲಿಕೆ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 10-01-2024 |

**<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ಫೆಬ್ರುವರಿ 2020 ರಿಂದ ಅಕ್ಟೋಬರ 2020 ವರೆಗೆ ವಲಯ ಅಧಿಕಾರಿ ಎಂದು ವಲಯ ಕಚೇರಿ ಸಂಖ್ಯೆ 8 ರಲ್ಲಿ ಕೆಲಸ ಮಾಡುತ್ತಿದ್ದೆನು.

2. ದಿಃ 2-9-2020 ರಂದು ಮಧ್ಯಾಹ್ನ 3 ಘಂಟೆಗೆ ನಾನು ಕಚೇರಿಯಲ್ಲಿದ್ದಾಗ ನಮ್ಮ ಕಚೇರಿಗೆ ಹುಬ್ಬಳ್ಳಿ ಉಪನಗರ ಪೊಲೀಸಠಾಣೆಯಿಂದ ಒಂದು ಪತ್ರಬಂದಿದ್ದು ನಮ್ಮ ಮೇಲಾಧಿಕಾರಿಯವರು ನನ್ನನ್ನು ಕರೆದು ಠಾಣೆಗೆ ಹೋಗುವಂತೆ ತಿಳಿಸಿದರು. ಅದರಂತೆ ನಾನು ಸಂಜೆ 4.30 ಘಂಟೆಗೆ ಹುಬ್ಬಳ್ಳಿಯ ಉಪನಗರ ಪೊಲೀಸಠಾಣೆಗೆ ಹೋದೆನು. ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ತಮಗೆ ಅನಧಿಕೃತವಾಗಿ ಗಾಂಜಾ ಮಾರಾಟವಾಗುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ನನಗೆ ನೋಟೀಸು ನೀಡಿದರು. ಸದರಿ ನೋಟೀಸನ್ನು ನೋಡುತ್ತಿದ್ದು

ಅದನ್ನು ಈಗಾಗಲೇ ನಿಶಾನೆ ಪಿ– 51 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ಈಗಾಗಲೇ ನಿಶಾನೆ ಪಿ–51 (ಬಿ) ಎಂದು ಗುರುತಿಸಲಾಗಿದೆ. ತಹಶೀಲ್ದಾರ ಕಚೇರಿಯಿಂದ ಇಬ್ಬರು ಪಂಚರು ಬಂದಿದ್ದು , ತೂಕ ಮತ್ತು ಮಾಪನ ಇಲಾಖೆಯಿಂದ ಒಬ್ಬರು ಇನ್ಸಪೆಕ್ಟರ ಬಂದಿದ್ದರು. ನಾನು , ಇನ್ಸಪೆಕ್ಟರ ಮತ್ತು ತಹಶೀಲ್ದಾರ ಕಚೇರಿಯಿಂದ ಬಂದ ಇಬ್ಬರು ಪಂಚರು ಸೇರಿ ಒಂದು ಜೀಪನಲ್ಲಿ ಹೋದೆವು. ತೂಕ ಮಾಡುವ ವ್ಯಕ್ತಿ ಮತ್ತು ಪೊಲೀಸ ಸಿಬ್ಬಂದಿ ಇನ್ನೊಂದು ವಾಹನದಲ್ಲಿ ಬಂದರು. ನಾವೆಲ್ಲರೂ ದೇಸಾಯಿ ಕ್ರಾಸ ಹತ್ತಿರ ನಿಂತುಕೊಂಡೆವು. ಸಂಜೆ ಸುಮಾರು 5.50 ಗಂಟೆ ಸುಮಾರಿಗೆ ಪಿಂಟೋ ಸರ್ಕಲ್ ಕಡೆಯಿಂದ ಒಂದು ಬೈಕ ಬಂದಿದ್ದು , ಪೊಲೀಸರು ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡು ಅಸೆನ್ಸ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ಹೋದರು. ಆದರೆ ಅವರಿಗೆ ಮುಂದೆ ಹೋಗಲು ರಸ್ತೆ ಇಲ್ಲದ ಕಾರಣ ಪೊಲೀಸರು ಅವರನ್ನು ಹಿಡಿದರು. ಪೊಲೀಸ ಇನ್ಸಪೆಕ್ಟರ ರವರು ಸದರಿ ವ್ಯಕ್ತಿಗಳ ಹೆಸರುಗಳನ್ನು ಕೇಳಲಾಗಿ ಬೈಕ ಚಾಲಕನ ಹೆಸರು ಮಾರುತಿ ಹರಿಣಶಿಕಾರಿ ಮತ್ತು ಹಿಂದೆ ಕುಳಿತವನ ಹೆಸರು ಚಂದಪ್ಪ ಹರಿಣಶಿಕಾರಿ ಎಂದು ತಿಳಿಸಿದರು. ಚಾಲಕನ ಬೆನ್ನಿನಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ ಹಾಕಿಕೊಂಡಿದ್ದನು. ಹಿಂದೆ ಕುಳಿತವನು ಹಳದಿ ಬಣ್ಣದಕೈ ಚೀಲ ಹಿಡಿದುಕೊಂಡಿದ್ದನು. ಇನ್ಸ ಪೆಕ್ಟರ ರವರು ಸದರಿ ವ್ಯಕ್ತಿಗಳನ್ನು ನಿಮ್ಮ ಅಂಗ ಜಪ್ತಿ ಮಾಡಬೇಕಾಗಿದೆ ಪತ್ರಾಂಕಿತ ಅಧಿಕಾರಿಯ ಮುಂದು ಮಾಡಬೇಕೋ ಅಥವಾ ಮ್ಯಾಜಿಸ್ಟ್ರೇಟ ಮುಖಾಂತರ ಮಾಡಬೇಕೋ ಎಂದು ಕೇಳಲಾಗಿ ಅವರು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೊ ಎಂದು ತಿಳಿಸಿದರು. ನಂತರ ಇನ್ಸಪೆಕ್ಟರ ರವರು ಮಾರುತಿ ಎನ್ನುವವನಿಗೆ ಪತ್ರ ನೀಡಿ ಆತನಿಂದ ಸಹಿ ಪಡೆದರು.

3. ಮಾರುತಿ ಹರಿಣಶಿಕಾರಿಯ ಹತ್ತಿರ ಇದ್ದ ಬ್ಯಾಗ ಚೆಕ್ ಮಾಡಲಾಗಿ ಅದರಲ್ಲಿ ಘಾಟು ವಾಸನೆ ಬರುತ್ತಿದ್ದು ಅದರಲ್ಲಿ 2 ಪ್ಲಾಸ್ಟಿಕ ಬಂಡಲಗಳು ಇದ್ದವು. 2 ಬಂಡಲಗಳನ್ನು ತೂಕದ ಮಶೀನನಲ್ಲಿ ತೂಕ ಮಾಡಲಾಗಿ ಒಂದು ಬಂಡಲ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಇದ್ದವು. ಇನ್ನೊಂದು ಪಾಕೇಟನಲ್ಲಿ

2 ಕೆ ಜಿ 20 ಗ್ರಾಂ ಗಾಂಜಾ ಇದ್ದವು. ಆರೋಪಿ ಮಾರುತಿಯ ಅಂಗ ಜಪ್ತಿ ಮಾಡಲಾಗಿ ಆತನಿಂದ ರೂ. 1000/- ಸಿಕ್ಕಿರುತ್ತವೆ.

4. ಇನ್ನೊಬ್ಬನ ಬ್ಯಾಗನ್ನು ಚೆಕ್ ಮಾಡಲಾಗಿ ಆತನ ಹತ್ತಿರ ಇದ್ದ ಬ್ಯಾಗನಲ್ಲಿ ಒಂದು ಬಂಡಲ ಇತ್ತು. ಸದರಿ ಬಂಡಲನ್ನು ತೂಕ ಮಾಡಲಾಗಿ ಅದರಲ್ಲಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು. ಆರೋಪಿ ಮಾರುತಿ ಯ ಸ್ವಾದೀನದಲ್ಲಿದ್ದ ಗಾಂಜಾ ಬಂಡಲಗಳಿಂದತಲಾ 100 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು. ಇನ್ನೊಬ್ಬನ ಸ್ವಾದೀನದಲ್ಲಿದ್ದ ಗಾಂಜಾ ಬಂಡಲಗಳಿಂದ ತಲಾ 50 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು. ಸ್ಯಾಂಪಲ ತೆಗೆದ ಗಾಂಜಾ ಗಳಿಗೆ ಎಸ್ 1, ಎಸ್ 2 ಮತ್ತು ಎಸ್ 3 ಎಂದು ಗುರುತಿಸಲಾಯಿತು. ಅಮಾನತುಪಡಿಸಿದ ಸ್ಯಾಂಪಲ ಗಾಂಜಾಗಳಿಗೆ ಜಿ ಎಂ ಎಫ್ -2 ಎಂಬ ಬೋಲ್ಟನಿಂದ ಸೀಲು ಮಾಡಲಾಯಿತು. ಉಳಿದ ಗಾಂಜಾಗಳನ್ನು ಪ್ಯಾಕ ಮಾಡಿ ಅವುಗಳಿಗೆ ಆರ್-1 , ಆರ್ 2 ಮತ್ತು ಆರ್ 3 ಎಂದು ಗುರುತಿಸಿ ಸೀಲು ಮಾಡಲಾಯಿತು. ಆರೋಪಿಗಳ ಮೋಟಾರ ಸೈಕಲನ್ನು ಜಪ್ತಿ ಮಾಡಲಾಯಿತು. ಸದರಿ ಬೈಕನ ನಂಃ ಕೆಎ-26-ಇಡಿ-2911 ಆಗಿತ್ತು. ಪೊಲೀಸರು ಎಲ್ಲ ವಸ್ತುಗಳನ್ನು ಅಮಾನತುಪಡಿಸಿಕೊಂಡು ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ . ಸದರಿ ಬರವಣಿಗೆಯನ್ನು ನಾನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಶಾನೆ ಪಿ-3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 3 (ಎನ್) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಸ್ಥಳದನಕಾಶೆ ತಯಾರಿಸಿದ್ದಾರೆ ಮತ್ತು ಫೋಟೊ ತೆಗೆದಿದ್ದಾರೆ. ಸದರಿ ಫೋಟೊಗಳನ್ನು ನೋಡಿದರೆ ಗುರುತಿಸುತ್ತೇನೆ. ಫೋಟೊಗಳನ್ನು ಈಗಾಗಲೇ ನಿಶಾನೆ ಪಿ- 4 ರಿಂದ 33 ಎಂದು ಗುರುತಿಸಲಾಗಿದೆ . ಆ ದಿನ ಅಮಾನತುಪಡಿಸಿದ ಮೋಟಾರ ಸೈಕಲ ನೋಡಿದರೆ ಗುರುತಿಸುತ್ತೇನೆ. ಮೋಟಾರ ಸೈಕಲನ ಫೋಟೊಗಳನ್ನು ನಿಶಾನೆ ಪಿ- 35 ರಿಂದ 41 ಎಂದು ಗುರುತಿಸಲಾಗಿದೆ. ಆ ದಿನ ಅಮಾನತುಪಡಿಸಿದ ಸ್ಯಾಂಪಲ ಗಾಂಜಾಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ

ಮುಮಾ–1 ರಿಂದ 3 ಎಂದು ಗುರುತಿಸಲಾಗಿದೆ. ಅಮಾನತುಪಡಿಸಿದ ರೂ. 1000 ವನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುಮಾ–6 ಎಂದು ಗುರುತಿಸಲಾಗಿದೆ. 1 ನೇ ಆರೋಪಿ ಹತ್ತಿರ ಇದ್ದ ಕಪ್ಪು ಬಣ್ಣದ ಬ್ಯಾಗ ಮತ್ತು 2 ನೇ ಆರೋಪಿ ಹತ್ತಿರ ಇದ್ದ ಹಳದಿ ಬಣ್ಣದ ಬ್ಯಾಗಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುಮಾ–4 ಮತ್ತು 5 ಎಂಂದು ಗುರುತಿಸಲಾಗಿದೆ. ಆ ದಿನ ದಸ್ತಗಿರಿ ಮಾಡಿದ ಆರೋಪಿತರನ್ನು ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ 1 ಮತ್ತು 2 ರವರನ್ನು ಗುರುತಿಸಿದ್ದಾರೆ .

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

5. ನನ್ನ ಅಧಿಕಾರಿಗೆ ಬಂದ ಪತ್ರವನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ– 38 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯಲ್ಲಿ 3 ಘಂಟೆಗೆ ಮಾಹಿತಿ ಬಂದಿದೆ ಎಂದು ಬರೆಯಲಾಗಿದೆ. ನಿಶಾನೆ ಪಿ–38 ರಲ್ಲಿ ನಮ್ಮ ಆಯುಕ್ತರು ಎಷ್ಟು ಘಂಟೆಗೆ ಸದರಿ ದಾಖಲೆಯನ್ನು ಪಡೆದುಕೊಂಡಿದ್ದಾರೆ ಎಂದು ನಮೂದು ಇಲ್ಲ. ನಾನು ಠಾಣೆಗೆ ಹೋದಾಗ ಸಂಜೆ 4.30 ಘಂಟೆ ಆಗಿತ್ತು. ನನಗೆ ನೀಡಿದ ನೋಟೀಸಗೆ ನಾನು ಸ್ವೀಕರಿಸಿದ ಬಗ್ಗೆ ಸಹಿ ಮಾಡಿದ್ದೇನೊ ಎನ್ನುವುದು ನೆನಪಿಲ್ಲ. ನಾನು ಸ್ವೀಕರಿಸಿದ ಬಗ್ಗೆ ಸಮಯವನ್ನು ನಮೂದು ಮಾಡಿದ್ದೇನೋ ಎಂದು ನೆನಪಿಲ್ಲ. ನಾನು ಸ್ವೀಕರಿಸಿದ ನೋಟೀಸನಲ್ಲಿ ಬಾತ್ಮಿ ಬಂದ ಸಮಯ 3 ಘಂಟೆ ಎಂದು ಬರೆದಿತ್ತು. ನಿಶಾನೆ ಪಿ–51 ರಲ್ಲಿ ಬಾತ್ಮಿ ಬಂದ ಸಮಯವನ್ನು ನಮೂದಿಸಿಲ್ಲ. ನಿಶಾನೆ ಪಿ–51 ನ್ನು ಸ್ವೀಕರಿಸಿದ ಬಗ್ಗೆ ಸಮಯ ನಮೂದಿಸಿಲ್ಲ ಮತ್ತು ಸ್ವೀಕರಿಸಿದ ದಿನಾಂಕವನ್ನು ನಮೂದಿಸಿಲ್ಲ. ದಿನಾಂಕ ಮತ್ತು ಸಮಯ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ಪಂಚನಾಮೆಯನ್ನು ಸಂಜೆ 6.15 ರಿಂದ 8.15 ರ ವರೆಗೆ ಬರೆಯಲಾಗಿದೆ . ಆರೋಪಿ ಮಾರುತಿಗೆ ನೀಡಿದ ನೋಟೀಸಗೆ ಎಷ್ಟು ಜನ ಸಹಿ ಮಾಡಿದ್ದಾರೆ ಎಂದು

ನನಗೆ ಗೊತ್ತಿಲ್ಲ. ನಾನು ಆರೋಪಿ ಮಾರುತಿ ಮತ್ತು ಚಂದಪ್ಪ ರವರ ಅಂಗ ಜಪ್ತಿ ಮಾಡಿದ್ದೇನೆ. ಅಂಗ ಜಪ್ತಿ ಮಾಡುವ ಮೊದಲು ಆರೋಪಿ ಚಂದಪ್ಪ ರವರ ಸಹಿ ಪಡೆದಿದ್ದೆವೋ ನೆನಪಿಲ್ಲ. ನಿಶಾನೆ ಪಿ–54 ನ್ನು ಆರೋಪಿ ಮಾರುತಿಗೆ ನೀಡಲಾಗಿದೆ.

6. ನಿಶಾನೆ ಪಿ–54 ಯಾವ ಪೊಲೀಸರು ಬರೆದಿದ್ದಾರೆ ಎಂದು ನನಗೆ ನೆನಪಿಲ್ಲ. ನಿಶಾನೆ ಪಿ–3 ರ ಎಲ್ಲ ಪುಟಗಳಿಗೂ ನಾನು ಸಹಿ ಮಾಡದೆ ಇರಬಹುದು. ಸ್ಯಾಂಪಲಗಳಲ್ಲಿ ಗಾಂಜಾದ ಎಲೆ ಮತ್ತು ಬೀಜ ಇದ್ದವು. ಪಂಚನಾಮೆಯಲ್ಲಿ ಗಾಂಜಾದ ಎಲೆ ಮತ್ತು ಬೀಜ ಎಂದು ಬರೆದಿದೆಯೋ ಎಂದು ನನಗೆ ನೆನಪಿಲ್ಲ. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿದ್ದೇನೆ. ಪಂಚನಾಮೆಯಲ್ಲಿ 1 ನೇ ಮತ್ತು 2 ನೇ ಆರೋಪಿತನ ಸ್ವಾಧೀನದಿಂದ ಗಾಂಜಾದ ಎಲೆಗಳನ್ನು ಅಮಾನತುಪಡಿಸಿದ ಬಗ್ಗೆ ಬರೆದಿದೆ ಅಂದರೆ ಸರಿ. ಗಾಂಜಾದ ಬೀಜಗಳನ್ನು ಅಮಾನತುಪಡಿಸಿದ ಬಗ್ಗೆ ನಮೂದು ಇಲ್ಲ ಅಂದರೆ ಸರಿ.

7. ಆ ದಿನ ನಾವು ಠಾಣೆಯಿಂದ ಸಂಜೆ 5.15 ಘಂಟೆಗೆ ಬಿಟ್ಟಿದ್ದೇವೆ. ಘಟನಾಸ್ಥಳಕ್ಕೆ ಸಂಜೆ 5.50 ಕ್ಕೆ ತಲುಪಿದ್ದೇವೆ. ನಾವು ಒಟ್ಟು ಎಷ್ಟು ಜನ ಘಟನಾಸ್ಥಳಕ್ಕೆ ಹೋಗಿದ್ದೇವೆ ಎಂದು ಹೇಳಲಾಗುವುದಿಲ್ಲ. ನಾವುಗಳು ಘಟನಾಸ್ಥಳಕ್ಕೆ ಹೋಗಲು ಉಪಯೋಗಿಸಿದ 2 ವಾಹನಗಳನ್ನು ಘಟನಾಸ್ಥಳಕ್ಕೆ ಹೋಗುವ ಮೊದಲು ಚೆಕ್ ಮಾಡಿ ಮಹಜರ ಮಾಡಿಲ್ಲ. ನಾನು ನನ್ನ ಅಂಗ ಜಪ್ತಿ ಮಾಡಿಕೊಂಡಿದ್ದೇನೆ. ಎಲ್ಲರೂ ಅಂಗ ಜಪ್ತಿ ಮಾಡಿಕೊಂಡಿದ್ದಾರೊ ಎಂದು ನನಗೆ ಗೊತ್ತಿಲ್ಲ. ನನ್ನ ಅಂಗ ಜಪ್ತಿ ಮಾಡಿಕೊಂಡ ಬಗ್ಗೆ ನಾನು ಬರವಣಿಗೆ ಮಾಡಿಲ್ಲ. ನಿಶಾನೆ ಪಿ–54 ರಂತೆ ಪೊಲೀಸರು ಆರೋಪಿಗೆ ನೀಡಿದ್ದಾರೆ . ಪಂಚನಾಮೆಯಲ್ಲಿ ಅಮಾನತುಪಡಿಸಿಕೊಂಡ ರೂ 1000 ರೂ ನೋಟಿನ ಡಿನಾಮಿನೇಷನ ನಮೂದು ಮಾಡಿದ್ದಾರೆ ಎಂದು ನೆನಪಿಲ್ಲ. ನಾನು ಆರೋಪಿತರ ಅಂಗ ಶೋಧನೆ ಮಾಡಿದ ಬಗ್ಗೆ ಪ್ರತ್ಯೇಕ ವರದಿಯನ್ನು ಪೊಲೀಸರಿಗೆ ಕೊಟ್ಟಿಲ್ಲ. ನಾನು ಪತ್ರಾಂಕಿತ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು

ಒಪ್ಪಿದ್ದೇನೆ ಎಂದು ನಾನು ಪ್ರತ್ಯೇಕ ಬರವಣಿಗೆ ಮಾಡಿಕೊಟ್ಟಿಲ್ಲ ಸಾಕ್ಷಿ ಸ್ವತಃ ನುಡಿಯುತ್ತಾರೆ ಪೊಲೀಸರು ಕೊಟ್ಟ ನೋಟೀಸಗೆ ನಾನು ಒಪ್ಪಿದ್ದೇನೆ ಎಂದು ಸಹಿ ಮಾಡಿದ್ದೇನೆ.

8. ನಾನು ಆ ದಿನ ಕರ್ತವ್ಯದಲ್ಲಿ ಇದ್ದೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ನಾನು 2 ನೇ ಆರೋಪಿ ಚಂದಪ್ಪನ ಅಂಗಶೋಧನೆ ಮಾಡಿದ ಬಗ್ಗೆ ಪಂಚನಾಮೆಯಲ್ಲಿ ನಮೂದು ಇಲ್ಲ ಅಂದರೆ ಸರಿ.

9. ನನ್ನ ಕಚೇರಿಯಿಂದ ಠಾಣೆಗೆ ಹೋಗಲು 5 ರಿಂದ 10 ನಿಮಿಷ ಬೇಕಾಗಬಹುದು. ಪಂಚನಾಮೆಗೆ ಎಲ್ಲ ಸಿಬ್ಬಂದಿಗಳು ಸಹಿ ಮಾಡಿದ್ದಾರೆ. ಆರೋಪಿಯ ಮೋಟಾರ ಸೈಕಲನ್ನು ಯಾವ ಸಿಬ್ಬಂದಿ ಹಿಡಿದಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಆರೋಪಿಗಳ ಅಂಗ ಶೋಧನೆ ಮಾಡುವ ಮೊದಲು ಸ್ವತಃ ನೋಟೀಸು ನೀಡಿ ನಿಮ್ಮ ಅಂಗ ಶೋಧನೆ ಮಾಡಬಹುದಾ ಎಂದು ಕೇಳಿಲ್ಲ. ನನಗೆ ಈಗ ತೋರಿಸಿದ ಫೋಟೊಗಳಲ್ಲಿ ಪಂಚನಾಮೆ ಬರೆಯುತ್ತಿರುವುದು ಕಂಡುಬರುವುದಿಲ್ಲ ಅಂದರೆ ಸರಿ.

10. ದಿಃ 2-9-2020 ರಂದು ಮಧ್ಯಾಹ್ನ 3 ಘಂಟೆಗೆ ನಾನು ಕಚೇರಿಯಲ್ಲಿದ್ದಾಗ ನಮ್ಮ ಕಚೇರಿಗೆ ಹುಬ್ಬಳ್ಳಿ ಉಪನಗರ ಪೊಲೀಸಠಾಣೆಯಿಂದ ಒಂದು ಪತ್ರಬಂದಿದ್ದು ನಮ್ಮ ಮೇಲಾಧಿಕಾರಿಯವರು ನನ್ನನ್ನು ಕರೆದು ಠಾಣೆಗೆ ಹೋಗುವಂತೆ ತಿಳಿಸಿದ್ದು ಅದರಂತೆ ನಾನು ಸಂಜೆ 4.30 ಘಂಟೆಗೆ ಹುಬ್ಬಳ್ಳಿಯ ಉಪನಗರ ಪೊಲೀಸಠಾಣೆಗೆ ಹೋದಾಗ ಠಾಣೆಯಲ್ಲಿ ಇನ್ಸಪೆಕ್ಟರ ರವರು ಇದ್ದು ತಮಗೆ ಅನಧಿಕೃತವಾಗಿ ಗಾಂಜಾ ಮಾರಾಟವಾಗುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ನನಗೆ ನೋಟೀಸು ನೀಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ

ಸರಿಯಲ್ಲ. ತಹಶೀಲ್ದಾರ ಕಚೇರಿಯಿಂದ ಇಬ್ಬರು ಪಂಚರು ಬಂದಿದ್ದು , ತೂಕ ಮತ್ತು ಮಾಪನ ಇಲಾಖೆಯಿಂದ ಒಬ್ಬರು ಇನ್ಸಪೆಕ್ಟರ ಬಂದಿದ್ದು , ನಾನು , ಇನ್ಸಪೆಕ್ಟರ ಮತ್ತು ತಹಶೀಲ್ದಾರ ಕಚೇರಿಯಿಂದ ಬಂದ ಇಬ್ಬರು ಪಂಚರು ಸೇರಿ ಒಂದು ಜೀಪನಲ್ಲಿ ಹೋದೆವು ಹಾಗೂ ತೂಕ ಮಾಡುವ ವ್ಯಕ್ತಿ ಮತ್ತು ಪೊಲೀಸ ಸಿಬ್ಬಂದಿ ಇನ್ನೊಂದು ವಾಹನದಲ್ಲಿ ಬಂದರು , ನಂತರ ನಾವೆಲ್ಲರೂ ದೇಸಾಯಿ ಕ್ರಾಸ ಹತ್ತಿರ ನಿಂತುಕೊಂಡಿದ್ದು ಸಂಜೆ ಸುಮಾರು 5.50 ಗಂಟೆ ಸುಮಾರಿಗೆ ಪಿಂಟೋ ಸಕರ್ಲ ಕಡೆಯಿಂದ ಒಂದು ಬೈಕ ಬಂದಿದ್ದು , ಪೊಲೀಸರು ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡು ಅಸ್ಸೆಸ ಚರ್ಚ ಹತ್ತಿರ ಇರುವ ಕಚ್ಚಾ ರಸ್ತೆಯಲ್ಲಿ ಹೋದರು , ಆದರೆ ಅವರಿಗೆ ಮುಂದೆ ಹೋಗಲು ರಸ್ತೆ ಇಲ್ಲದ ಕಾರಣ ಪೊಲೀಸರು ಅವರನ್ನು ಹಿಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸ ಇನ್ಸಪೆಕ್ಟರ ರವರು ಸದರಿ ವ್ಯಕ್ತಿಗಳ ಹೆಸರುಗಳನ್ನು ಕೇಳಲಾಗಿ ಬೈಕ ಚಾಲಕನ ಹೆಸರು ಮಾರುತಿ ಹರಿಣಶಿಕಾರಿ ಮತ್ತು ಹಿಂದೆ ಕುಳಿತವನ ಹೆಸರು ಚಂದಪ್ಪ ಹರಿಣಶಿಕಾರಿ ಎಂದು ತಿಳಿಸಿದ್ದು ಚಾಲಕನ ಬೆನ್ನಿನಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ ಹಾಕಿಕೊಂಡಿದ್ದು ಹಿಂದೆ ಕುಳಿತವನು ಹಳದಿ ಬಣ್ಣದಕೈ ಚೀಲ ಹಿಡಿದುಕೊಂಡಿದ್ದು ಇನ್ಸ ಪೆಕ್ಟರ ರವರು ಸದರಿ ವ್ಯಕ್ತಿಗಳನ್ನು ನಿಮ್ಮ ಅಂಗ ಜಪ್ತಿ ಮಾಡಬೇಕಾಗಿದೆ ಪತ್ರಾಂಕಿತ ಅಧಿಕಾರಿಯ ಮುಂದು ಮಾಡಬೇಕೋ ಅಥವಾ ಮ್ಯಾಜಿಸ್ಟ್ರೇಟ ಮುಖಾಂತರ ಮಾಡಬೇಕೋ ಎಂದು ಕೇಳಲಾಗಿ ಅವರು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬೇಕೊ ಎಂದು ತಿಳಿಸಿದ್ದು ಇನ್ಸಪೆಕ್ಟರ ರವರು ಮಾರುತಿ ಎನ್ನುವವನಿಗೆ ಪತ್ರ ನೀಡಿ ಆತನಿಂದ ಸಹಿ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

11. ಮಾರುತಿ ಹರಿಣಶಿಕಾರಿಯ ಹತ್ತಿರ ಇದ್ದ ಬ್ಯಾಗ ಚೆಕ್ ಮಾಡಲಾಗಿ ಅದರಲ್ಲಿ ಘಾಟು ವಾಸನೆ ಬರುತ್ತಿದ್ದು ಅದರಲ್ಲಿ 2 ಪ್ಲಾಸ್ಟಿಕ ಬಂಡಲಗಳು ಇದ್ದು 2 ಬಂಡಲಗಳನ್ನು ತೂಕದ ಮಶೀನನಲ್ಲಿ ತೂಕ ಮಾಡಲಾಗಿ ಒಂದು ಬಂಡಲ 2 ಕೆ ಜಿ 31 ಗ್ರಾಂ ತೂಕದ ಗಾಂಜಾ ಇದ್ದವು ಮತ್ತು ಇನ್ನೊಂದು

ಪಾಕೇಟನಲ್ಲಿ 2 ಕೆ ಜಿ 20 ಗ್ರಾಂ ಗಾಂಜಾ ಇದ್ದು ಆರೋಪಿ ಮಾರುತಿಯ ಅಂಗ ಜಪ್ತಿ ಮಾಡಲಾಗಿ ಆತನಿಂದ ರೂ. 1000/– ಸಿಕ್ಕಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

12. ಇನ್ನೊಬ್ಬನ ಬ್ಯಾಗನ್ನು ಚೆಕ್ ಮಾಡಲಾಗಿ ಆತನ ಹತ್ತಿರ ಇದ್ದ ಬ್ಯಾಗನಲ್ಲಿ ಒಂದು ಬಂಡಲ ಇತ್ತು. ಸದರಿ ಬಂಡಲನ್ನು ತೂಕ ಮಾಡಲಾಗಿ ಅದರಲ್ಲಿ 1 ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು ಹಾಗೂ ಆರೋಪಿ ಮಾರುತಿ ಯ ಸ್ವಾಧೀನದಲ್ಲಿದ್ದ ಗಾಂಜಾ ಬಂಡಲಗಳಿಂದತಲಾ 100 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು, ಇನ್ನೊಬ್ಬನ ಸ್ವಾಧೀನದಲ್ಲಿದ್ದ ಗಾಂಜಾ ಬಂಡಲಗಳಿಂದ ತಲಾ 50 ಗ್ರಾಂ ಗಾಂಜಾವನ್ನು ಸ್ಯಾಂಪಲಗಾಗಿ ಪಡೆಯಲಾಯಿತು. ಸ್ಯಾಂಪಲ ತೆಗೆದ ಗಾಂಜಾ ಗಳಿಗೆ ಎಸ್ 1, ಎಸ್ 2 ಮತ್ತು ಎಸ್ 3 ಎಂದು ಗುರುತಿಸಲಾಯಿತು ಹಾಗೂ ಆರೋಪಿಗಳ ಮೋಟಾರ ಸೈಕಲನ್ನು ಜಪ್ತಿ ಮಾಡಲಾಗಿದ್ದು ಸದರಿ ಬೈಕನ ನಂಃ ಕೆಎ–26–ಇಡಿ–2911 ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ಎಲ್ಲ ವಸ್ತುಗಳನ್ನು ಅಮಾನತುಪಡಿಸಿಕೊಂಡು ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಮತ್ತು ಪಂಚನಾಮೆ ಕಾಲಕ್ಕೆ ಸ್ಥಳದನಕಾಶೆ ತಯಾರಿಸಿದ್ದಾರೆ ಮತ್ತು ಫೋಟೊ ತೆಗೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

13. ಆರೋಪಿತರಿಗೂ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟಿ ಸವಾಲು 3 ಮತ್ತು 4 ನೇ ಆರೋಪಿತರ ಪರ ವಕೀಲರಿಂದಃ**

**ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, ಧಾರವಾಡ.